# ತಲ್ಲಣಗಳ 'ಗೇಮ್'



ನಾಲ್ಕು ವರ್ಷಗಳಲ್ಲಿ ಕಾಶಿ ಅವರು ರೂಪಿಸಿದ ಕಲಾಕೃತಿಗಳ 'ತಿರುಗಾಟ' ಪ್ರಸ್ತುತ ಬೆಂಗಳೂರಿನಿಂದ ಆರಂಭವಾಗಿದೆ. (ಸುಮುಖ ಗ್ಯಾಲರಿಯಲ್ಲಿ ಫೆ.3ರಿಂದ 20ರವರೆಗೆ). 'ಗೇಮ್' ಎನ್ನುವ ಹೆಸರಿನ ಆಯ್ದ ಇಪ್ಪತ್ತೈದು ಕಲಾಕೃತಿಗಳ ಪಯಣ ಬೆಂಗಳೂರಿನಿಂದ ಚೆನ್ನೈ, ಮುಂಬೈ ಹಾಗೂ ದೆಹಲಿಗೆ ಸಾಗಲಿದೆ.

■ **ರಘುನಾಥ ಚ.ಹ.**

ಒಂದು ಮೇಜು. ಅದು ಕಿರಾಣಿ ಅಂಗಡಿಯ ಗಲ್ಲಾಪೆಟ್ಟಿಗೆಯೂ ಆಗಬಹುದು ಅಥವಾ ರಿಸೆಷನ್ ದಿನಗಳ ಕಾರ್ಪೊರೇಟ್ ಕಚೇರಿಯ ಮೇಜೂ ಆಗಿರಬಹುದು. ಮೇಜಿನ ಕೈಹಿಡಿಕೆಯ ಒಳಪೆಟ್ಟಿಗೆ ತೆರಕೊಂಡಿದೆ. ಅದರಲ್ಲಿ ಏನಿರಬಹುದು– ರೂಪಾಯಿ ನೋಟು, ನಾಣ್ಯಗಳು ಅಥವಾ ಕಚೇರಿ ಕಡತಗಳು. ಊಹುಂ, ಅದರ ತುಂಬಾ ಹಸಿ ಮೆಣಸಿನಕಾಯಿ! ಅವುಗಳಲ್ಲಿ ಕೆಲವು ಹಣ್ಣಾಗಿವೆ. ಅವು ಖಾರ ಹೆಚ್ಚು. ಈ ಮೆಣಸಿನಕಾಯಿ ಖಾರ ಆರ್ಥಿಕ ಹಿಂಜರಿತದ ತೀವ್ರತೆಯನ್ನು ಪರಿಣಾಮಕಾರಿಯಾಗಿ ಬಿಂಬಿಸುವಂತಿದೆ.

ಅಡುಗೆಮನೆ ಕುಕ್ಕೆಯಲ್ಲಿ ಇರಬೇಕಾದ ಮೆಣಸಿನಕಾಯಿ ಮೇಜಿನ ಒಳಪೆಟ್ಟಿಗೆಯಲ್ಲಿ ತುಂಬಿಕೊಂಡಿರುವುದು ರೈತರ ಇಂದಿನ ದಾರುಣ ಸ್ಥಿತಿಯ ರೂಪಕದಂತೆಯೂ ಇದೆಯಲ್ಲವೇ? ಬಹುರಾಷ್ಟ್ರೀಯ ಕಂಪನಿಗಳ ಹಿಡಿತ, ದಂತಗೋಪುರದಲ್ಲಿನ ಅಧಿಕಾರಶಾಹಿಗಳ ಭರವಸೆಗಳು– ಇವೆಲ್ಲವನ್ನೂ ಮೆಣಸಿನಕಾಯಿ ರೂಪಕ ಹಿಡಿದಿಡುವಂತಿದೆ. ಹೀಗೆ, ವರ್ತಮಾನದ ತಲ್ಲಣಗಳ ವಿವಿಧ ಮುಖಗಳನ್ನು ಚಿತ್ರವೊಂದರ ಮೂಲಕ ಹಿಡಿದಿಡುವ ಪ್ರಯತ್ನ ಕಲಾವಿದ ರವಿಕುಮಾರ ಕಾಶಿ ಅವರದ್ದು.

(8ನೇ ಪುಟ ನೋಡಿ)

ಎಂಗೇಜಿಂಗ ಬುದ್ಧ

